# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

## ಸಿ.ಸಿ. ನಂ. 233/ 2021

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ1

ದಿನಾಂಕಃ **17-02-2024**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | |
|---|---|
| ಸಾಕ್ಷಿಯ ಹೆಸರು | - ರತನಸಿಂಗ |
| ತಂದೆಯ/ಗಂಡನ ಹೆಸರು | - ಇಂದ್ರಸಿಂಗ |
| ವಯಸ್ಸು | -?37 ವರ್ಷ |
| ಉದ್ಯೋಗ | - ಗುತ್ತಿಗೆ ಕಾರ್ಮಿಕ ಕೆಲಸ |
| ವಾಸಸ್ಥಳಃ | - ಕೃಷ್ಣಾ |

ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ

ಮೃತನು ನನ್ನ ತಂದೆ ಯಾಗಬೇಕು. ಆರೋಪಿ ಪರಿಚಯ ಇಲ್ಲ. ನನ್ನ ಆರೋಪಿ ಪರಿಚಯ ಇಲ್ಲ. ನನ್ನ ತಂದೆ ಮೃತ ಪಟ್ಟು ಈಗ ಮೂರು ವರ್ಷ ಆಯಿತು. ಅಪಘಾತ ಹೇಗೆ ಆಯಿತು, ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ದೂರು ಕೊಟ್ಟಿರುತ್ತೇನೆ. ಆದರೆ ದೂರಿನಲ್ಲಿ ಬರೆದಿದೆ ವಿಷಯ ನನಗೆ ಗೊತ್ತಿದೆ ಆದರೆ ಪೋಲಿಸರು ನನಗೆ ಆರೋಪಿ ತೋರಿಸಿರುವುದಿಲ್ಲ .

( ಈ ಹಂತದಲ್ಲಿ ಹಿರಿಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೇಳಿದ್ದು ಅವಕಾಶ ನೀಡಲಾಗಿದೆ.)

ಪಾಟೀ ಸವಾಲುಃ ಪರಃ ಶ್ರೀ ಹಿರಿಯ ಸ.ಸ. ವಕೀಲರಿಂದಃ

ದಿಃ08-02-2021 ರಂದು ಬೆಃ06-00 ಗಂಟೆ ನಮ್ಮ ತಂದೆಯು ಅಪಘಾತದಲ್ಲಿ ಗಾಯಗಳಾಗಿವೆ ಎಂದು ನನಗೆ ಒಂದು ದೂರವಾಣಿ ಬಂದಿದ್ದು ಮತ್ತು ಯಾದಗಿರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಸೇರಿಕೆ ಮಾಡಲಾಗಿದೆ ಎಂದು ತಿಳಿಸಿದ್ದರಿಂದ ನಾನು ತಕ್ಷಣವೇ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಲಾಗಿ ನಮ್ಮ ತಂದೆ ಮೃತಪಟ್ಟಿದ್ದು ಕಂಡು ಬಂತು. ನಂತರ ನಾನು ದೂರನ್ನು

ಕೊಟ್ಟಿರುತ್ತೇನೆ ಅದು ನಿಪಿ-1 ಎಂದು, ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ತಿಳಿದು ಬಂತು ಪೋಲಿಸರು ಸಹ ನನಗೆ ತಿಳಿಸಿದ್ದಾರೆ ಅದರಂತೆ ನಾನು ನಿಪಿ-1ರಂತೆ ಮೌಖಿಕ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆಸ್ಪತ್ರೆಯಲ್ಲಿ ಶವಪಂಚನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಶವ ಪಂಚನಾಮೆ ನಿಪಿ-2 ಎಂದು, ಶವ ಪಂಚನಾಮೆ ಕಾಲಕ್ಕೆ ತೆಗೆದು ನಾಲ್ಕು ಪೊಟೋಗಳನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.